ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 114-120
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರು ಜಿಲ್ಲೆಯಲ್ಲಿ ಶೈವಧರ್ಮದ ಬೆಳವಣಿಗೆ : ಒಂದು ಚಾರಿತ್ರಿಕ ಅಧ್ಯಯನ

**ಸುಧಾಕರ[1] ಮತ್ತು ಪ್ರೊ.ಶಲ್ವಪಿಳ್ಳೈ ಅಯ್ಯಂಗಾರ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು

**Abstract:**

*ಶೈವ ಧರ್ಮವು ಭರತಖಂಡದ ಅತಿಪುರಾತನ ಧರ್ಮವಾಗಿದೆ. ಕ್ರಿಸ್ತಪೂರ್ವ ಕಾಲದಿಂದಲೂ ಭಾರತದಲ್ಲಿ ಶಿವಪೂಜೆಯೂ ಲಿಂಗರೂಪದಲ್ಲಿ ಮತ್ತು ಮೂರ್ತಿರೂಪದಲ್ಲಿ ಜನಪ್ರಿಯವಾಗಿತ್ತು ಎಂಬುದಕ್ಕೆ ಸ್ಪಷ್ಟ ಆಧಾರಗಳು ದೊರೆಯುತ್ತವೆ. ಶಿಲಾಲಿಂಗಗಳು ಹರಪ್ಪ–ಮೊಹೆಂಜೊದಾರೋ ಸಂಸ್ಕೃತಿಯಲ್ಲಿಯೇ ಕಂಡುಬಂದಿವೆ. ಅವರು ಪರಬ್ರಹ್ಮ ವಸ್ತುವನ್ನು ಶಿವ, ರುದ್ರ ಎಂದು ಪೂಜಿಸತ್ತಿದ್ದರು. ದಕ್ಷಿಣ ಭಾರತದಲ್ಲಿಯೂ ಚರಿತ್ರೆಯ ಪೂರ್ವಕಾಲದಿಂದಲೂ ಶೈವಮತ ಆಚರಣೆಯಲ್ಲಿತ್ತೆಂದು ಸಂಪ್ರದಾಯ ಪರಂಪರೆಗಳು ಹೇಳುತ್ತವೆ. ಶೈವ ದೇವಾಲಯಗಳ ನಿರ್ಮಾಣ ಮತ್ತು ಶಿವಲಿಂಗಗಳ ಪ್ರತಿಷ್ಠಾಪನೆ ದಕ್ಷಿಣ ಭಾರತದಲ್ಲಿ ಅಗಸ್ತ್ಯಋಷಿಯ ಆಗಮನದೊಂದಿಗೆ ಆರಂಭವಾಯಿತೆಂದು ಸ್ಕಂದಪುರಾಣ ಮತ್ತು ದಕ್ಷಿಣ ಭಾರತದ ವಿವಿಧ ಸಾಹಿತ್ಯಾಧಾರಗಳಿಂದ ತಿಳಿದುಬರುತ್ತದೆ.[1] ಕರ್ನಾಟಕದ ಶೈವ ಮತಾವಲಂಬಿಗಳಲ್ಲಿ ಕಾಪಾಲಿಕರು, ಕಾಳಮುಖರು ಮತ್ತು ವೀರಶೈವರು ಪ್ರಮುಖರಾಗಿದ್ದಾರೆ. ವೀರಶೈವ ಎಂಬುದು ಶೈವ ಮತದ ಒಂದು ಶಾಖೆ. ಇದನ್ನು ಕಲ್ಯಾಣದ ಕಲಚೂರಿ ಬಿಜ್ಜಳನ ಆಸ್ಥಾನದ ಭಂಡಾರಿಯಾಗಿದ್ದ ಬಸವಣ್ಣನವರು (ಕ್ರಿ.ಶ.1131 – 1163) ಸ್ಥಾಪಿಸಿದರು. ಜಾತಿಭೇದ, ಲಿಂಗಭೇದಗಳನ್ನು ವೀರಶೈವರು ಒಪ್ಪುವುದಿಲ್ಲ. ಎಲ್ಲ ಮಾನವರು ಸಮ ಎಂಬುದು ಅವರ ಭಾವನೆ. ಎದೆಯ ಮೇಲೆ ಇಷ್ಟಲಿಂಗವನ್ನು ಧರಿಸಿ ಅದನ್ನು ಪೂಜಿಸುವುದು, ಅಂತೆಯೇ ಗುರು ಜಂಗಮರನ್ನುಪೂಜಿಸುವುದಕ್ಕೆ ವೀರಶೈವ ಮತ ಪ್ರಾಮುಖ್ಯತೆ ಕೊಡುತ್ತದೆ.[2]. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಶೈವಧರ್ಮದ ಬೆಳವಣಿಗೆಯ ಒಂದು ಚಾರಿತ್ರಿಕ ಅಧ್ಯಯನವನ್ನು ಚರ್ಚಿಸಲಾಗಿದೆ.*

**Keywords:** *ಮೈಸೂರು, ಶೈವಧರ್ಮ, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು*

## ಪೀಠಿಕೆ

ಮೈಸೂರು ಜಿಲ್ಲೆಯನ್ನು ಆಳ್ವಿಕೆ ಮಾಡಿದ ವಿವಿಧ ರಾಜಮನೆತನಗಳಾದ ಕದಂಬರು, ಪುನ್ನಾಟ ಅರಸರು, ಗಂಗರು, ಚಂಗಾಳ್ವರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಸ್ಥಳೀಯ ಆಡಳಿತ ಪ್ರಭುಗಳು ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಶೈವಧರ್ಮದ ತತ್ವಸಿದ್ಧಾಂತಗಳನ್ನು ಒಪ್ಪಿ ಮೈಸೂರು ಜಿಲ್ಲೆಯದಾದ್ಯಂತ ಶೈವಧರ್ಮದ ಬೆಳವಣಿಗೆಗೆ ಆಶ್ರಯ ಕೊಟ್ಟರು. ಮೈಸೂರಿನ ಚಾಮುಂಡಿ ಬೆಟ್ಟದ ಮೇಲಿರುವ ಮಹಾಬಲೇಶ್ವರ ದೇವಾಲಯ,

**Please cite this article as:** ಸುಧಾಕರ ಮತ್ತು ಶಲ್ವಪಿಳ್ಳೈ ಅಯ್ಯಂಗಾರ್. (2025). ಮೈಸೂರು ಜಿಲ್ಲೆಯಲ್ಲಿ ಶೈವಧರ್ಮದ ಬೆಳವಣಿಗೆ: ಒಂದು ಚಾರಿತ್ರಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(2), 114–120

ನಂಜನಗೂಡಿನ ನಂಜುಂಡೇಶ್ವರ ದೇವಾಲಯ, ಬೆಟ್ಟದಪುರದ ಸಿಡಿಲುಮಲ್ಲಿಕಾರ್ಜುನ ಅಥವಾ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯ, ಮೂಗೂರಿನ ದೇಶೇಶ್ವರ ದೇವಾಲಯ, ಸಾಲಿಗ್ರಾಮದ ಜ್ಯೋತಿರ್ಲಿಂಗೇಶ್ವರ ದೇವಾಲಯ, ವರುಣದ ಮಹಾಲಿಂಗೇಶ್ವರ ದೇವಾಲಯ, ಮಹದೇಶ್ವರ ದೇವಾಲಯ, ತಲಕಾಡಿನ ಪಂಚಲಿಂಗೇಶ್ವರ ದೇವಾಲಯಗಳು, ಕುಕ್ಕರಹಳ್ಳಿಯ ನನ್ನೇಶ್ವರ ದೇವಾಲಯ, ಬೋಗಾದಿಯ ಬೋಗೇಶ್ವರ ದೇವಾಲಯ, ತಿರುಮಕೂಡಲು ನರಸೀಪುರದ ಅಗಸ್ತ್ಯೇಶ್ವರ ದೇವಾಲಯ, ಬನ್ನೂರಿನ ಹನುಮಂತೇಶ್ವರ ದೇವಾಲಯ, ಹಿರಿನಂದಿಯ ಸೋಮೇಶ್ವರ ದೇವಾಲಯ, ಸುತ್ತೂರಿನ ಸೋಮೇಶ್ವರ ದೇವಾಲಯ, ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯ, ನಂಜನಗೂಡಿನ ಸಮೀಪದಲ್ಲಿರುವ ಚಿಕ್ಕಯ್ಯನ ಛತ್ರ ಗ್ರಾಮದ ಪ್ರಸನ್ನ ನಂಜುಂಡೇಶ್ವರ ದೇವಾಲಯ ಮುಂತಾದವುಗಳು ನೂರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿರುವ ಹಾಗೂ ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಪ್ರಸಿದ್ಧ ಶೈವ ದೇವಾಲಯಗಳೆನಿಸಿಕೊಂಡಿದ್ದು, ಪ್ರಸಿದ್ಧ ಶೈವ ಕ್ಷೇತ್ರಗಳೂ ಆಗಿವೆ.

ಕ್ರಿ.ಶ.4ನೇ ಶತಮಾನದ ಮಧ್ಯಭಾಗದಿಂದ ಪ್ರಾರಂಭವಾದ ಗಂಗರ ಆಳ್ವಿಕೆ ಕ್ರಿ.ಶ.10ನೇ ಶತಮಾನದ ಕೊನೆಯವರೆಗೆ ಹಾಗೆಯೇ ಮುಂದುವರೆಯಿತು. ಗಂಗರು ಮೂಲತಃ ವೈದಿಕ ಧರ್ಮದ ಅನುಯಾಯಿಗಳು ಸ್ವತಃ ಬ್ರಾಹ್ಮಣರೇ ಆಗಿದ್ದರೆಂದು ಕೆಲವು ಮೂಲಗಳಿಂದ ತಿಳಿದುಬರುತ್ತದೆ. ಇದರಿಂದಾಗಿ ಗಂಗರಿಗೆ ಮುಂಚಿತವಾಗಿ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ಮೈಸೂರು ಜಿಲ್ಲೆಯಲ್ಲಿ ಶೈವಧರ್ಮ ಇತ್ತೆಂಬುದು ಸ್ಪಷ್ಟವಾಗುತ್ತದೆ. ಇದರಿಂದಾಗಿ ಗಂಗರು ಶೈವಧರ್ಮದ ಪೋಷಕರಾಗಿದ್ದರು. ಮೈಸೂರು ಜಿಲ್ಲೆಯ ಅತ್ಯಂತ ಪ್ರಾಚೀನ ದೇವಾಲಯಗಳೆಲ್ಲವೂ ಗಂಗರ ಕಾಲಕ್ಕೆ ಸೇರಿದ್ದಾಗಿವೆ. ಗಂಗರ ಕಾಲದ ದೇವಾಲಯಗಳು ಇಂದು ಹೆಚ್ಚಿನ ಪ್ರಮಾಣದಲ್ಲಿ ಉಳಿದುಕೊಂಡು ಬಂದಿಲ್ಲ. ಒಂದು ವೇಳೆ ಇದ್ದರೂ ಕಾಲಕ್ರಮೇಣ ಸಂಪೂರ್ಣವಾಗಿ ಜೀರ್ಣೋದ್ಧಾರ ವಾಗಿವೆ.[3] ತಲಕಾಡಿನ ಪಂಚಲಿಂಗಗಳಲ್ಲಿ ಮರಳೇಶ್ವರ ಮತ್ತು ಪಾತಾಳೇಶ್ವರ ದೇವಾಲಯಗಳು ಮತ್ತು ತಲಕಾಡಿನ ಸಮೀಪದಲ್ಲೇ ಇರುವ ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿಯ ದೇವಾಲಯ ಇತ್ಯಾದಿ ದೇವಾಲಯಗಳಲ್ಲಿರುವ ಲಿಂಗಗಳೂ ಸಹ ಗಂಗರ ಕಾಲದಲ್ಲಿಯೇ ಪ್ರತಿಷ್ಠಾಪಿತವಾದವುಗಳೆಂದು ಇತಿಹಾಸತಜ್ಞರು ಗುರುತಿಸಿದ್ದಾರೆ. ಆ ನಂತರ ಆಳ್ವಿಕೆ ನಡೆಸಿದ ರಾಜವಂಶಗಳ ಕಾಲದಲ್ಲಿ ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯವು ವಿಸ್ತಾರಗೊಂಡಿರುವುದು ಕಂಡುಬರುತ್ತದೆ. ದಕ್ಷಿಣಕಾಶಿ ಎಂದೇ ಪ್ರಸಿದ್ಧವಾಗಿರುವ ನಂಜನಗೂಡು ಅಥವಾ ಗರಳಪುರಿಯ ನಂಜುಂಡೇಶ್ವರ ಅಥವಾ ಶ್ರೀಕಂಠೇಶ್ವರ ದೇವಾಲಯವೂ ಸಹ ಗಂಗರ ಕಾಲದಲ್ಲಿ ಸ್ಥಾಪಿಸಲ್ಪಟ್ಟು ಆನಂತರ ಬಂದ ರಾಜವಂಶಗಳ ಆಳ್ವಿಕೆಯ ಕಾಲದಲ್ಲಿ ವಿಸ್ತರಿಸಲ್ಪಟ್ಟಿರುವುದು ಅವುಗಳ ವಾಸ್ತುಶಿಲ್ಪಶಾಸ್ತ್ರ ಮತ್ತು ಶಾಸನಾಧಾರಗಳಿಂದ ದೃಢಪಟ್ಟಿದೆ.

ಮೈಸೂರು ಸಮೀಪದ ಹೆಮ್ಮನಹಳ್ಳಿಯಲ್ಲಿರುವ ಮಹಾಲಿಂಗೇಶ್ವರ ದೇವಾಲಯವೂ ಕೂಡ ಗಂಗರ ಕಾಲದಲ್ಲಿ ನಿರ್ಮಾಣಗೊಂಡು ಆ ನಂತರ ಅಧಿಕಾರಕ್ಕೆ ಬಂದ ರಾಜವಂಶಗಳ ಆಳ್ವಿಕೆಯ ಅವಧಿಯಲ್ಲಿ ವಿಸ್ತಾರಗೊಂಡಿರುವುದು ಕಂಡುಬರುತ್ತದೆ. ಹುಣಸೂರು ತಾಲೂಕಿನ ಹರವೆ ಗ್ರಾಮದ ಕೆರೆಯ ಬಳಿಯಲ್ಲಿ ಪಾಳುಬಿದ್ದಿರುವ ಪುರಾತನವಾದ ಈಶ್ವರನ ಗುಡಿಯಿದೆ. ಈ ಗುಡಿಯ ಕಲ್ಲಿನ ಮೇಲೆ ಕ್ರಿ.ಶ. 8ನೆಯ ಶತಮಾನಕ್ಕೆ ಸೇರಿದ ಶಾಸನವೊಂದು ದೊರೆತಿದ್ದು, ಇದು ಗಂಗದೊರೆ ಶಿವಮಾರನ ಆಳ್ವಿಕೆಯನ್ನು ಸೂಚಿಸುತ್ತದೆ.[4] ಹೀಗಾಗಿ ಈ ಈಶ್ವರ ದೇವಾಲಯವನ್ನು ಕ್ರಿ.ಶ. 8ನೆಯ ಶತಮಾನಕ್ಕೆ ಸೇರಿದ್ದೆಂದು ಊಹಿಸಬಹುದಾಗಿದೆ.

ಕ್ರಿ.ಶ. 10ನೇ ಶತಮಾನದ ಹಿರೇನಂದಿ ಶಾಸನದಲ್ಲಿ ಗಂಗರ ಅರಸ 3ನೇ ರಾಚಮಲ್ಲನು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಈ ಊರನ್ನು 'ನಂದಿ' ಎಂಬ ಹೆಸರಿನಿಂದ ಕರೆದಿರುವುದು ತಿಳಿದುಬರುತ್ತದೆ.[5] ಆ ಗ್ರಾಮದಲ್ಲಿ ಗಂಗರ ಕಾಲಕ್ಕೆ ಸೇರಿದ ಸೋಮೇಶ್ವರ ದೇವಾಲಯವು ನಿರ್ಮಾಣವಾಗಿದ್ದು, ನಂತರ ಹೊಯ್ಸಳರ ಕಾಲದಲ್ಲಿ ಹೊಯ್ಸಳ ಶೈಲಿಯ ಸುಂದರವಾದ ಕುಸುರಿಯಿಂದ ನವರಂಗದ ಭಾಗ ನಿರ್ಮಾಣವಾಗಿದೆ. ಕ್ರಿ.ಶ.1286ರ ಮಾಗುಡಿಲು ಶಾಸನವು ತಿಳಿಸುವಂತೆ ಒಂದನೆಯ ಅಥವಾ ಎರಡನೇ ಶಿವಮಾರನ ಆಳ್ವಿಕೆಯ ಕಾಲದಲ್ಲಿ ಮರಣಹೊಂದಿದ್ದ ವೇಡಿರೂನನ ಪುಣ್ಯಾರ್ಥವಾಗಿ ರೂಢಿಯಲ್ಲಿದ್ದ ತೆರಿಗೆ ನೀತಿಯಂತೆ ಭೂ ತೆರಿಗೆಯನ್ನು ನೀಲಕಂಠೇಶ್ವರ ದೇವಾಲಯಕ್ಕೆ ದಾನಬಿಟ್ಟ ಅಂಶವನ್ನು ದಾಖಲಿಸುತ್ತದೆ.[6]

ಚೋಳರು ಗಂಗರನ್ನು ಹತ್ತಿಕ್ಕಿ ತಲಕಾಡನ್ನು ವಶಪಡಿಸಿಕೊಂಡು ತಮ್ಮ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದ ಮೇಲೆ ಶೈವ ಪಂಥದ ಕಟ್ಟಾ ಅನುಯಾಯಿಗಳಾಗಿದ್ದ ಅವರು ದಕ್ಷಿಣ ಕರ್ನಾಟಕದಾದ್ಯಂತ ಪ್ರಧಾನವಾಗಿ ಶೈವಪಂಥವನ್ನು ಪ್ರೋತ್ಸಾಹಿಸಿ ಬೆಳೆಸಿದರು. ಶೈವಪಂಥ ಇವರ ಕಾಲದಲ್ಲಿ ಒಂದು ಸ್ಪಷ್ಟವಾದ ಸ್ವರೂಪವನ್ನು ಪಡೆದುಕೊಂಡು; ಮೈಸೂರು ಜಿಲ್ಲೆಯದಾದ್ಯಂತ ಪ್ರಸಾರಗೊಂಡು ಉತ್ತಮ ಬೆಳವಣಿಗೆಯನ್ನು ಸಾಧಿಸಿತು. ಇದರಿಂದ ಮೈಸೂರು ಜಿಲ್ಲೆಯ ಸುತ್ತಮುತ್ತ ಅನೇಕ ಶೈವ ದೇವಾಲಯಗಳು, ಶಿವಲಿಂಗಗಳು ಮತ್ತು ಮಂಟಪಗಳು ಸ್ಥಾಪನೆಯಾದವಲ್ಲದೆ, ಅವುಗಳ ಉಳಿವು ಮತ್ತು ಬೆಳವಣಿಗೆಗಾಗಿ ಹೆಚ್ಚಿನ ಭೂದಾನಗಳು ದೊರೆಯಲ್ಪಟ್ಟವು. ಈ ಜಿಲ್ಲೆಯಲ್ಲಿರುವ ಪ್ರಮುಖ ಶೈವ ದೇವಾಲಯಗಳು ಚೋಳರ ಆಳ್ವಿಕೆಯಲ್ಲಿ ಕಾವೇರಿ ಕಪಿಲ ದಂಡೆಯಾದ್ಯಂತ ನಿರ್ಮಾಣವಾದವು. ಈ ಕಾರ್ಯವು ತಮಿಳುನಾಡು ಕಡೆಯಿಂದ ಪ್ರವೇಶಿಸಿತೆಂದೂ ಅಭಿಪ್ರಾಯಪಡಲಾಗಿದೆ.[7] ದಕ್ಷಿಣ ಕರ್ನಾಟಕದಾದ್ಯಂತ ವಿಶೇಷವಾಗಿ ಮೈಸೂರು, ನಂಜನಗೂಡು, ಹೆಗ್ಗಡದೇವನಕೋಟೆ, ಅಂಕನಾಥಪುರ, ಮಟಕೆರೆ, ತಲಕಾಡು, ಪಿರಿಯಾಪಟ್ಟಣ, ಕೃಷ್ಣರಾಜಸಾಗರ, ಹುಣಸೂರು, ಮೈಸೂರು ಮೊದಲಾದ ಕಡೆಗಳಲ್ಲಿ ಶೈವ ದೇವಾಲಯಗಳನ್ನು ಮತ್ತು ಅಗ್ರಹಾರಗಳನ್ನು ಸ್ಥಾಪಿಸಿದರು.[8] ತಲಕಾಡಿನ ವೈದ್ಯೇಶ್ವರ ದೇವಾಲಯವನ್ನು ಚೋಳರ ಕಾಲದಲ್ಲಿ ನಿರ್ಮಿಸಲಾಯಿತು. ಕ್ರಿ.ಶ.1017ರ ಕಲ್ಕುಂದ ಗ್ರಾಮದ ಶಾಸನದಿಂದ, ಕಲ್ಕುಂದದ ಮಹಾಜನರು ಊರಿನ ಮಹಾದೇವ ದೇವಾಲಯಕ್ಕೆ ದತ್ತಿ ಬಿಟ್ಟಿರುವ ವಿಷಯವು ತಿಳಿದುಬರುತ್ತದೆ.[9] ಈ ಶಾಸನೋಕ್ತ ದೇವಾಲಯದ ವಾಸ್ತುಶೈಲಿಯು ಕ್ರಿ.ಶ.10–11ನೆಯ ಶತಮಾನದ ಲಕ್ಷಣವನ್ನು ಹೊಂದಿರುವುದರಿಂದ ಇದೇ ದೇವಾಲಯವು ನಂತರದ ದಿನಗಳಲ್ಲಿ ಸೋಮೇಶ್ವರ ದೇವಾಲಯವೆಂದು ಕರೆಯಲ್ಪಟ್ಟು, ಪ್ರಸ್ತುತದಲ್ಲಿ ಮಹಾಲಿಂಗೇಶ್ವರ ದೇವಾಲಯವೆಂದು ಪ್ರಸಿದ್ಧವಾಗಿದೆ ಎಂದು ಇತಿಹಾಸಕಾರರಾದ ಡಾ. ಎಚ್.ಎಸ್. ಗೋಪಾಲ್‌ರಾವ್ ಅವರು ಅಭಿಪ್ರಾಯಪಟ್ಟಿದ್ದಾರೆ. ಕ್ರಿ.ಶ.1021ರ ಒಂದನೇ ರಾಜೇಂದ್ರಚೋಳನ ಪ್ರಶಸ್ತಿಯನ್ನು ಒಳಗೊಂಡಿರುವ ಶಾಸನವು ಮೈಸುನಾಡಿನ ನಂದಿಗುಂದದಲ್ಲಿರುವ ಮಲ್ಲೇಶ್ವರನ ದೇವರಿಗೆ ನಿತ್ಯಪೂಜೆ, ನೈವೇದ್ಯ ಮತ್ತು ನಂದಾದೀಪಗಳಿಗಾಗಿ ಭೂದಾನವನ್ನು ನೀಡಿದ ವಿವರವನ್ನು ನಮೂದಿಸಿದೆ.[10] ಕುಲೋತುಂಗ ಚೋಳನ ರಾಣಿ ಬುವನಿಮು ಉಡೈಯಾಳೋಡುಮ್ ಮಟಕೆರೆಯ ಶ್ರೀ ರಾಮೇಶ್ವರ ದೇವರ ಉತ್ಸವಕ್ಕಾಗಿ ನೀಡಲಾಗಿರುವ ದಾನದ ಬಗ್ಗೆ ಹೆಗ್ಗಡದೇವನಕೋಟೆ 44ನೇ ಶಾಸನದಲ್ಲಿ ಉಕ್ತವಾಗಿದೆ.[11] ಕ್ರಿ.ಶ. 1020ರ ಹೆಗ್ಗಡದೇವನಕೋಟೆ 58ನೇ ಬೆಳತೂರಿನ ಶಾಸನದಲ್ಲಿ ಒಂದನೇ ರಾಜೇಂದ್ರ ಚೋಳನ ಆಳ್ವಿಕೆಯ ಕಾಲದಲ್ಲಿ ನೆರವೇರಲ್ಪಟ್ಟ ಬಾಣೇಶ್ವರ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ವಿವರಿಸಲಾಗಿದೆ. ರಾಜನ ಅಣತಿಯ ಮೇರೆಗೆ ನುಗುನಾಡಿನ ಅಧಿಪತಿ

ಹಾಗೂ ಪ್ರಮುಖ ವ್ಯಾಪಾರಿವರ್ಗಗಳಾದ ನಲ್ಲಮುರುಗಸೆಟ್ಟಿಯ ಮಗ ಬಸವಸೆಟ್ಟಿಯು ದೇವಾಲಯವನ್ನು ಸರಿಪಡಿಸಿ, ಲಿಂಗವನ್ನು ಪ್ರತಿಷ್ಠಾಪಿಸಿ, ರುದ್ರಹೋಮ ಮಾಡಿಸಿರುವುದು ದಾಖಲಾಗಿದೆ.[12]

ಚೋಳರ ಆನಂತರ ಮೈಸೂರು ಜಿಲ್ಲೆಯು ಹೊಯ್ಸಳರ ಅಧೀನಕ್ಕೊಳಪಟ್ಟಿತ್ತು. ಕರ್ನಾಟಕ ಮಾತ್ರವಲ್ಲದೆ ಇಡೀ ದಕ್ಷಿಣ ಭಾರತದ ರಾಜಕೀಯ ಚರಿತ್ರೆಯಲ್ಲಿ ಹೊಯ್ಸಳರು ಬಹುಮುಖ್ಯ ಪಾತ್ರವಹಿಸಿದರು. ಶೈವಪಂಥದ ಮಹಾಪೋಷಕರಾಗಿದ್ದ ಚೋಳರನ್ನು ಕರ್ನಾಟಕ ಪ್ರದೇಶದಿಂದ ಉಚ್ಚಾಟಿಸಿದ ಕೀರ್ತಿ ಹೊಯ್ಸಳ ಸಂತತಿಯವರಿಗೆ ಸಲ್ಲುತ್ತದೆ. ಹುಣಸೂರು ತಾಲೂಕಿನ ತೊಂಡಾಳು ಗ್ರಾಮದಲ್ಲಿರುವ ಹೊಯ್ಸಳ ದೊರೆ 1ನೆಯ ನರಸಿಂಹನ ಆಳ್ವಿಕೆಯ ಕಾಲದ ಕ್ರಿ.ಶ. 1167ರ ಶಾಸನದಲ್ಲಿ ತೊಂಡಾಳು (ತೊಂಡೆಯವಾಳು)ಗ್ರಾಮದ ತೆನದಂಕರ ಬೋಗೆಯ ಸಾವಂತನ ಮಗ ಹರದಗಾವುಂಡ ಮತ್ತು ಕಾಳೆಯಗಾವುಂಡನ ಒಡಹುಟ್ಟಿದ ಐವರು ಸಹೋದರರು ಸೇರಿ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿಕೊಟ್ಟು ಆ ದೇಗುಲಕ್ಕಾಗಿ ಕೆರೆಯನ್ನು ಕಟ್ಟಿಸಿ ಭೂಮಿಯನ್ನು ದಾನನೀಡುವುದರ ಜೊತೆಗೆ 1/3 (ಮೂರನೆಯ ಒಂದು)ಭಾಗ ತೆರಿಗೆಯನ್ನು ದೇಗುಲಕ್ಕೆ ನೀಡಿರುವ ವಿಷಯವು ಆ ದೇಗುಲದ ಅಡಿಪಾಯದ ಕಲ್ಲಿನ ಮೇಲೆ ಕೊರೆಯಲಾಗಿರುವ ಶಾಸನದಿಂದ ತಿಳಿದುಬರುತ್ತದೆ.[13] ನಂಜನಗೂಡು ತಾಲೂಕಿನ ಹುಣಸನಾಳು ಗ್ರಾಮದಲ್ಲಿರುವ ಕ್ರಿ.ಶ. 1164ರ ಶಾಸನದಲ್ಲಿ ಕಲ್ಲಗೌಡನ ಮಗ ಮಂಚಗೌಡ, ಮಸಣಗೌಡನ ಮಗ ಮಲಗೌಡ, ಸೆಟ್ಟಿಗೌಡನ ಮಗ ಅಪ್ಪಗೌಡ ಮುಂತಾದವರು ಕಾರೆನಾಡ ಹುಣಸೆಯಲ್ಲಿ ಚಂದ್ರಶೇಖರ ದೇವರ ಶಿವಾಲಯವನ್ನು ನಿರ್ಮಿಸಿ ಆ ದೇವಾಲಯದ ಶ್ರೀಕಾರ್ಯಕ್ಕೆ ಭೂಮಿಯನ್ನು ಮತ್ತು ನಂದಾದೀಪಕ್ಕಾಗಿ ಬಾಗಿಲುವಣ (ತೆರಿಗೆ)ವನ್ನೂ ನೀಡಿದ ವಿಷಯದ ಉಲ್ಲೇಖವಿದೆ.[14] ತಿರುಮಕೂಡಲು ನರಸೀಪುರ ತಾಲೂಕಿನ ಬೆಟ್ಟಹಳ್ಳಿ ಗ್ರಾಮದಲ್ಲಿರುವ ಕ್ರಿಶ. 1179ರ ಮತ್ತೊಂದು ಶಾಸನವು ವಿಟ್ಟನಪಳ್ಳಿ ಬೆಟ್ಟದ ಮೇಲಿನ ಮಲ್ಲಿಕಾರ್ಜುನ ದೇವರಿಗೆ ಮಾಸನಾಯ್ಕನ ಅಧಿಕಾರಿ ಪೆರ್ಗಡೆ ವೈಚಪ್ಪ ಮತ್ತು ರಾಮಯ್ಯ ಇವರುಗಳು ದಾನನೀಡಿದ ವಿಷಯವನ್ನು ತಿಳಿಸುತ್ತದೆ.[15] ಬನ್ನೂರಿನಲ್ಲಿರುವ ಕ್ರಿ.ಶ. 10ನೆಯ ಶತಮಾನದ ಶಾಸನವೊಂದರಲ್ಲಿ ಚೋಳದೊರೆ ರಾಜೇಂದ್ರ ಚೋಳನ ಆಳ್ವಿಕೆಯ ಕಾಲದಲ್ಲಿ ಬನ್ನೂರಿನ ಹನುಮಂತೇಶ್ವರ ದೇವಾಲಯಕ್ಕೆ ಊರಿನ ಮಹಾಜನಗಳು ಭೂಮಿಯನ್ನು ದಾನಕೊಟ್ಟ ಬಗ್ಗೆಯೂ ಮತ್ತು ಕೋಟುನಾಡಿನ ತತ್ತನೂರ ವಣಿಕನು ದಾನ ನೀಡಿದ ಬಗ್ಗೆಯೂ ತಿಳಿದು ಬರುತ್ತದೆ.[16] ನಂಜನಗೂಡು ತಾಲ್ಲೂಕಿನ ಕ್ರಿ.ಶ.1198ನೇ ವರ್ಷದ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲದ ಶಾಸನವು ಈತನ ಮಹಾಪ್ರಧಾನ, ಸರ್ವಾಧಿಕಾರಿ ಮತ್ತು ಹಿರಿಯದಣ್ಣಾಯಕನಾದ ಗೌಡಯ್ಯನ ಅಧಿಕಾರದಲ್ಲಿ ಕಾಟೂರಲ್ಲಿ ಹುಟ್ಟಿದ ನಾಲ್ವರು ಸೋಮೇಶ್ವರ ದೇವಾಲಯ ಕಟ್ಟಿಸಿದ ವಿಷಯವನ್ನು ಉಲ್ಲೇಖಿಸಿದೆ.[17]

ಮೈಸೂರಿನ ಸಮೀಪದ ಕುಮಾರಬೀಡು ಗ್ರಾಮದಲ್ಲಿರುವ ಇಮ್ಮಡಿ ವೀರಬಲ್ಲಾಳನ ಕಾಲದ ಶಾಸನದಲ್ಲಿ ಇವನ ದಂಡನಾಯಕನಾದ ಬಿಟ್ಟಿಮಯ್ಯನ ಸಮ್ಮುಖದಲ್ಲಿ 'ಹಡದನದ ಮಂಡಳಿಕ ಮರಿವಿಸೆಯ ಕೇತದೇವ, ಹೊರಣದ ಭೂತಗೌಡ, ಬೆನಕನಹಳ್ಳಿಯ ಹರದಗೌಡ ಒರಕೋಡಿನ ಸೆಟ್ಟಿಗೌಡ, ಓಜಮಂಗಲದ ಬೊಪ್ಪಗೌಡ, ಮೈಸೂರ ಹೊಯ್ಸಳ ಗೌಡ, ಕುಂಬಗೌಡ ಮುಂತಾದಗೌಡರುಗಳು ಮತ್ತು ಮೈಸುನಾಡ ಸಮಸ್ತ ಪ್ರಭುಗೌಡರುಗಳು ತಮಗೆ ಸಲ್ಲಬೇಕಾದ ತೆರಿಗೆ, ಹದಿಕೆ, ಸಂಬಳ, ಉಳುವರಿ, ಮದುವಣ ಇತ್ಯಾದಿಗಳನ್ನು ಬೆಂಬೇಶ್ವರ ದೇವರಿಗೆ ದೇವದಾನವಾಗಿ ನೀಡಿದ ವಿವರವಿದೆ.[18] ಕ್ರಿ.ಶ. 11–12ನೆಯ ಶತಮಾನಕ್ಕೆ ಸೇರಿದ ತುಂಬಲ ಗ್ರಾಮದ ಶಾಸನವೊಂದು ಕಾವಗಾವುಂಡನ ಮಗಳು

ಕುಂದಬ್ಬೆಯು ಶಿವಾಲಯವನ್ನು ಕಟ್ಟಿಸಿ ಅಲ್ಲಿ ಒಂದು ಕೆರೆ ಮತ್ತು ಉದ್ಯಾನವನ್ನು ನಿರ್ಮಿಸಿಕೊಟ್ಟ ಬಗ್ಗೆ ತಿಳಿಸುತ್ತದೆ. ಅಲ್ಲದೆ ಶಿವಾಲಯವನ್ನು ಕಟ್ಟಿದವನು ಕುಂದೆಯ್ಯ ಎಂಬುದನ್ನೂ ಬರೆಯಲಾಗಿದೆ.[19] ಕ್ರಿ.ಶ.1276ರ ಹೊಯ್ಸಳ ಮೂರನೇ ನರಸಿಂಹನ ಸೋಮನಾಥಪುರದ ಶಾಸನವು ಸೋಮನಾಥಪುರದಲ್ಲಿರುವ ಪಂಚಲಿಂಗ ದೇವಾಲಯಗಳಿಗೆ ನೀಡಿದ ದತ್ತಿಯನ್ನು ಉಲ್ಲೇಖಿಸಿದೆ.[20] ಬಿಜ್ಜಳೇಶ್ವರ, ಹೆಂಮೇಶ್ವರ, ರೇವಳೇಶ್ವರ, ಬೈರಲೇಶ್ವರ ಮತ್ತು ಸೋವಲೇಶ್ವರ ದೇವಾಲಯಗಳೇ ಶಾಸನೋಕ್ತ ಪಂಚಲಿಂಗ ದೇವಾಲಯಗಳಾಗಿವೆ. ಹೆಗ್ಗಡದೇವನಕೋಟೆ 56ನೇ ಬೆಳತೂರು ಶಾಸನದಲ್ಲಿ ಎರಡನೇ ವೀರಬಲ್ಲಾಳದೇವನ ಮಗನಾದ ವೀರನರಸಿಂಗದೇವನು ಆಳುತ್ತಿರುವಾಗ, ನುಗುನಾಡ ಮಹಾಪ್ರಭು ಇಮ್ಮಡಿದೇವತಾರಾಯನ ಮಗ ಮಾಚಿದೇವ ಹಾಗೂ ಇತರರು ಸೇರಿಕೊಂಡು ಬೆಳತೂರಿನ ಬಾಣೇಶ್ವರ ದೇವಾಲಯವನ್ನು ನಿರ್ಮಿಸಿದರಲ್ಲದೆ, ದೇವಾಲಯದ ವಿವಿಧ ಭಾಗಗಳನ್ನು ಪೂರ್ಣಗೊಳಿಸುವಾಗ ಒಬ್ಬೊಬ್ಬರು ಒಂದೊಂದು ಬಗೆಯ ನಿರ್ಮಾಣದ ವಸ್ತುಗಳಾದ ಇಟ್ಟಿಗೆ, ಕಲ್ಲು, ಮರಳು ಮುಂತಾದವುಗಳನ್ನು ಪೂರೈಸಿದರೆಂಬ ಕುತೂಹಲಕಾರಿಯಾದ ವಿಷಯ ತಿಳಿದುಬರುತ್ತದೆ.[21]

ಕ್ರಿ.ಶ.1211ರ ಹೆಗ್ಗಡದೇವನಕೋಟೆ 74ನೇ ಕಳ್ಳಂಬಾಳು ಶಾಸನದಲ್ಲಿ ಎರಡನೇ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಕಳ್ಳಂಬಾಳುವಿನಲ್ಲಿರುವ ಕಾಮೇಶ್ವರ ದೇವರಿಗೆ ನುಗುನಾಡಿನ ಕುಂದೂರು ಗ್ರಾಮವನ್ನು ಆ ದೇವಾಲಯದ ನಿತ್ಯೋತ್ಸವ ಹಾಗೂ ಇತರ ಉತ್ಸವಗಳ ಸಲುವಾಗಿ ದತ್ತಿಯಾಗಿ ನೀಡಿರುವುದು ದಾಖಲಾಗಿದೆ.[22] ಕ್ರಿ.ಶ. 1218ರ ಹೆಗ್ಗಡದೇವನಕೋಟೆ 82ನೇ ಕಳ್ಳಂಬಾಳು ಶಾಸನದಲ್ಲಿ ಎರಡನೇ ವೀರಬಲ್ಲಾಳನ ಹಿರಿಯರಾಣಿ ಅಭಿನವ ಕೇತಲದೇವಿ ಆಳುತ್ತಿರಲು ಮಹಾಪ್ರಧಾನ, ಮಹಾಪಸಾಯಕ, ಸರ್ವಾಧಿಕಾರಿ ಹಾಗೂ ಕುಮಾರನಾಡನ್ನು ಆಳುತ್ತಿರುವಾಗ ಕಾಮೇಶ್ವರ ದೇವರ ಅಂಗಭೋಗ ರಂಗಭೋಗಕ್ಕಾಗಿ ನುಗುನಾಡಿನ ಕುಂದೂರು ಗ್ರಾಮವನ್ನು ಹಾಗೂ ಕೆಲವು ಭೂದಾನಗಳನ್ನು ನೀಡಿರುವುದು ದಾಖಲಾಗಿದೆ.[23] ಹೆಗ್ಗಡದೇವನಕೋಟೆ 84ನೆಯ ಬೆಳತೂರ ಶಾಸನದ ಕಾಲ ಕ್ರಿ.ಶ.1255. ಈ ಶಾಸನವು ಸೋಮೇಶ್ವರ ಕಾಲಕ್ಕೆ ಸೇರಿದ್ದಾಗಿದ್ದು, ಶಾಸನದಲ್ಲಿ ಮಲ್ಲಿಕಾರ್ಜುನ ಮತ್ತು ಬಾಣೇಶ್ವರ ದೇವಾಲಯಗಳಿಗೆ ಬಿಟ್ಟ ದತ್ತಿಯ ವಿಷಯವನ್ನು ಪ್ರಸ್ತಾಪಿಸಲಾಗಿದೆ.[24] ಹೊಯ್ಸಳ ದೊರೆ ಇಮ್ಮಡಿ ವೀರಬಲ್ಲಾಳನ ಆಳ್ವಿಕೆ ಕಾಲದ ಕ್ರಿ.ಶ. 1211ರ ಶಾಸನದಲ್ಲಿ ಚಾಮುಂಡಿಬೆಟ್ಟದಲ್ಲಿರುವ ಮಹಾಬಲೇಶ್ವರ ದೇವರಿಗೆ ಕುಂಠಿಯ ಮಲ್ಲಿಕಾರ್ಜುನ, ಸಿಂದಗಟ್ಟದ ಕಲಿದೇವ, ಕುದೂರು ಮಲ್ಲಿಕಾರ್ಜುನ ಮುಂತಾದವರು ದಾನ ನೀಡಿದ ಬಗ್ಗೆ ಉಲ್ಲೇಖಿಸಲಾಗಿದೆ.[25] ಕ್ರಿ.ಶ. 1228ರ ಬದನಾಳು ಶಾಸನದಲ್ಲಿ ಎಡೆನಾಡಿನ ಗಂಗಪುರ, ಬನವಳ(ಬದನವಾಳು) ಗ್ರಾಮಗಳ ಸಮಸ್ತ ಪ್ರಭು ಗಾವುಂಡಗಳು ಆ ಊರಿನ ಮೂಲಸ್ಥಾನೇಶ್ವರ ದೇವರಿಗೆ ಮತ್ತು ದೊಂಬೇಶ್ವರ ದೇವರಿಗೆ ನಿತ್ಯ ನೈವೇದ್ಯಕ್ಕೆ ದಾನ ಧರ್ಮ ನೀಡಿದ ಬಗ್ಗೆ ವಿವರವು ತಿಳಿದುಬರುತ್ತದೆ.[26]

ಹೊಯ್ಸಳರ ನಂತರ ಅಧಿಕಾರಕ್ಕೆ ಬಂದ ವಿಜಯನಗರದರಸರು ಶೈವ ಧರ್ಮದ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು. ಇದಕ್ಕೆ ಆಧಾರವಾಗಿ ಈ ಜಿಲ್ಲೆಯ ಶಾಸನಾಧಾರಗಳನ್ನು ಪರೀಕ್ಷಿಸಲಾಗಿದೆ. ಕ್ರಿ.ಶ. 1422ರ ಹಂಪಾಪುರದ ಶಾಸನದಲ್ಲಿ (ಕ್ರಯಪತ್ರ) ಪಂಡರಿದೇವರ ಮಗ ತಿಬ್ಬನಾಥ ದೇವರು, ಲಖಮ, ಲಖ್ಖಣ್ಣ, ಮಧುವಣ್ಣ, ಗಂಗಣ್ಣ, ಸೇನಬೋವ ಮಾಯಣ್ಣ ಮುಂತಾದ ಮಹಾಜನಗಳು ಮದ್ದೂರ ನಾಗಣ್ಣನ ಮಗನಿಗೆ 48 ವರಹಗಳಿಗೆ ಕ್ರಯಪತ್ರ ಮಾಡಿಕೊಟ್ಟ ಬಗ್ಗೆ ಉಲ್ಲೇಖಿಸಲಾಗಿದೆ.[27] ಹೆಗ್ಗಡದೇವನಕೋಟೆ 143 ಮತ್ತು 133ನೆಯ ಉಯ್ಯಂಬಹಳ್ಳಿಯ ಹಾಗೂ ಮಗ್ಗೆಯ ಎರಡೂ

ಶಾಸನಗಳು ಸಾಳುವ ನರಸಿಂಹನ ಅಧಿಕಾರಿಯಾಗಿದ್ದ ಪ್ರಧಾನ ತಿಪ್ಪರಸಯ್ಯನು ಕ್ರಮವಾಗಿ ಕಿತ್ತೂರಿನ ರಾಮಯ್ಯ ದೇವರಿಗೂ, ಮಗ್ಗೆಯ ಬಾಣೇಶ್ವರ ದೇವರಿಗೂ ದತ್ತಿಯನ್ನು ಬಿಟ್ಟ ಮಾಹಿತಿಯ ಕುರಿತಾಗಿವೆ.[28] ಕ್ರಿ.ಶ. 1423ಕ್ಕೆ ಸಲ್ಲುವ ಹೆಗ್ಗಡದೇವನಕೋಟೆ 91ನೇ ಸರಗೂರು ಶಾಸನದ ಪ್ರಕಾರ ಬಯಿನಾಡ ಮಹಾಪ್ರಭು ಮಸಣಿಹಳಿಯ ಕಂಪಣ ಗವುಡರು ಬೆಳಗುಳದ ಶ್ರೀ ಗುಂಮಟನಾಥ ಸ್ವಾಮಿಗಳ ಅಂಗರಂಗಭೋಗ ಸಂರಕ್ಷಣಾರ್ಥವಾಗಿ ತೋಟಹಳಿಯ ಕೆರೆಗದ್ದೆ ಬೆದ್ದಲು ತೋಟತುಡಿಕೆ ಮೊದಲಾದವುಗಳನ್ನು ಧಾರಾಳಪೂರ್ವಕವಾಗಿ ನೀಡಿದರೆಂಬುದು ಕಂಡುಬರುತ್ತದೆ.[29] ಕ್ರಿ.ಶ. 1497ರ ಸೋಮನಾಥಪುರದ ಶಾಸನದಲ್ಲಿ ಸಾಳುವ ವಂಶದ ದೊರೆ ಈಶ್ವರನ ಮಗನಾದ ನರಸಿಂಹನ ಆದೇಶದ ಮೇರೆಗೆ ನಂಜರಾಜ ಒಡೆಯನು ಸೋಮನಾಥಪುರದಲ್ಲಿ ಅಗ್ರಹಾರವನ್ನು ನಿರ್ಮಿಸಿ ಹಲವು ಸೂತ್ರ ಗೋತ್ರಗಳ ವಿಪ್ರರಿಗೆ ದಾನಮಾಡಿದ ವಿಷಯದ ವಿವರಗಳಿರುವುದು ಕಂಡುಬರುತ್ತದೆ ಈ ಶಾಸನದಲ್ಲಿ ದಾನವನ್ನು ಪಡೆದ ವಿಪ್ರರುಗಳ ಹೆಸರುಗಳು ನಂಜಿನಾಥ, ಗೋಪಿನಾಥ, ಸೋಮನಾಥ, ಅಗಸ್ತ್ಯನಾಥ, ಲಕ್ಷ್ಮೀನಾಥ, ತಿರುಮಲನಾಥ, ಮಳಲೇನಾಥ, ಮೈಲಾರಭಟ್ಟ ಇತ್ಯಾದಿಯಾಗಿದ್ದು, ಈ ಹೆಸರುಗಳನ್ನು ನೋಡಿದಾಗ ಇವರು ನಾಥಶೈವ ಪಂಥದ ಅನುಯಾಯಿಗಳೇ ಇರಬಹುದೆಂಬುದು ತಿಳಿದುಬರುತ್ತದೆ.[30] ಕ್ರಿ.ಶ. 1600ರ ಹಾರನಹಳ್ಳಿಯ ಶಾಸನವು ನಂಜರಾಜಪಟ್ಟಣದ ಚಂಗಾಳ್ವ ದೊರೆ ರುದ್ರಗಣನು ತಮ್ಮ ತಂದೆ ಶ್ರೀಕಂಠರಾಜಯ್ಯ ಮತ್ತು ತಾಯಿ ವಲ್ಲಬಾಂಬಾಮ್ಮನವರಿಗೂ ತನಗೂ ಮುಕ್ತಿಯುಂಟಾಗಲಿ ಎಂದು ಬಯಸಿ ಭೈರವಪುರದ ಅನ್ನದಾನಿ ಮಲ್ಲಿಕಾರ್ಜುನಸ್ವಾಮಿಯ ಜಾತ್ರಾ ಸಂದರ್ಭದಲ್ಲಿ ಬರುವ ಜನಗಳಿಗೆ ಅನ್ನದಾನವನ್ನು ಮಾಡಲಿಕ್ಕಾಗಿ ಧರ್ಮಛತ್ರ(ಮಠ)ವನ್ನು ಕಟ್ಟಿಸಿ. ಕೋಡುಂಬಳ್ಳಿಯ ಚಂದ್ರಶೇಖರ ದೇವರಿಗೆ ಹಾರನಹಳ್ಳಿಯನ್ನು ದಾನವಾಗಿ ನೀಡಿದ ವಿಷಯದ ವಿವರಗಳನ್ನು ಒಳಗೊಂಡಿದೆ.[31]

ವಿಜಯನಗರ ಸಾಮ್ರಾಜ್ಯದ ಪತನಾನಂತರ ಅವರ ಸಾಮಂತರಾಗಿದ್ದ ಮೈಸೂರು ಒಡೆಯರು, ಉಮ್ಮತ್ತೂರು, ಬಯಲ್ನಾಡು, ನುಗುನಾಡು, ನವಿಲೆನಾಡು, ಕಣಿಯಲನಾಡು, ಕಬಿನಿನಾಡು ಮೊದಲಾದ ಸ್ಥಳೀಯ ಪ್ರಭುಗಳು ಮತ್ತು ಹೈದರಾಲಿ, ಟಿಪ್ಪು ಮುಂತಾದ ಸರ್ವಾಧಿಕಾರಿಗಳು ಮೈಸೂರು ಜಿಲ್ಲೆಯ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಈ ಸ್ಥಳೀಯ ಪ್ರಭುಗಳು ಸಹ ವಿಜಯನಗರದರಸರ ಪರಂಪರೆಯನ್ನು ಮುಂದುವರೆಸಿ, ತಮ್ಮ ಅನುದಾನಶಕ್ತಿ ಹಾಗೂ ಧಾರ್ಮಿಕ ಸಹಿಷ್ಣುತಾ ನೀತಿಗಳಿಗನುಗುಣವಾಗಿ ಎಲ್ಲಾ ಧಾರ್ಮಿಕ ಪಂಥಗಳಿಗೆ ಸಮಾನ ಅವಕಾಶ ಮತ್ತು ಸ್ವಾತಂತ್ರ್ಯ ನೀಡಿದ್ದರು. ಹೀಗೆ ಮೈಸೂರು ಜಿಲ್ಲೆಯಲ್ಲಿ ಶೈವದರ್ಮವು ಹೆಚ್ಚು ಜನಪ್ರಿಯವಾಗಿದ್ದು ನಂಜನಗೂಡು, ತಲಕಾಡು, ಪಿರಿಯಪಟ್ಟಣ, ಕೃಷ್ಣರಾಜನಗರ, ಹುಣಸೂರು, ಸಾಲಿಗ್ರಾಮ, ಉಮ್ಮತ್ತೂರು, ಹೆಗ್ಗಡದೇವನಕೋಟೆ ಕಿತ್ತೂರು, ಮಗ್ಗೆ, ಬೆಳತೂರು, ಬೆಟ್ಟದಪುರ, ಕಳ್ಳಂಬಾಳು ಸಾಲಿಗ್ರಾಮ, ಟಿ.ನರಸೀಪುರ ಮೊದಲಾದವುಗಳು ಪ್ರಮುಖ ಶೈವ ಕೇಂದ್ರಗಳಾಗಿದ್ದವು. ಹೀಗೆ ಶೈವಧರ್ಮವು ಈ ಜಿಲ್ಲೆಯಲ್ಲಿ ಹೆಚ್ಚು ಜನಪ್ರಿಯವಾಗಿತ್ತೆಂದು ಅಭಿಪ್ರಾಯಪಡಬಹುದು.

**ಕೊನೆಟಿಪ್ಪಣಿಗಳು**


1. *ಕ್ಯೂ.ಜೆ.ಎಂ.ಎಸ್.* (1927). ಸಂಚಿಕೆ–17, ಬೆಂಗಳೂರು. ಪುಟ.185–186 & ಮುಗಳಿ ರಂ.ಶೀ. (1960). *ಕನ್ನಡ ಸಾಹಿತ್ಯ ಚರಿತ್ರೆ, ಸಂ–1.* ಪುಟ.169.
2. ರಂಗಸ್ವಾಮಯ್ಯ, ಜಿ.ಆರ್. (1992). *ಕರ್ನಾಟಕ ಸಂಕ್ಷಿಪ್ತ ಚರಿತ್ರೆ.* ಮೈಸೂರು ಪುಟ.216–219
3. *ಎ.ಕ.–3, 4, 5ರ ಮೈಸೂರು ಜಿಲ್ಲೆಯ ಶಾಸನಗಳು* ಮತ್ತು ರಂಗಸ್ವಾಮಯ್ಯ, ಜಿ.ಆರ್.

(1992). *ಕರ್ನಾಟಕ ಸಂಕ್ಷಿಪ್ತ ಚರಿತ್ರೆ.* ಮೈಸೂರು ಪುಟ.216–219

4. ಎಕ–4, ಹುಣಸೂರು–3, ಹರವೆ, ಪುಟ.484
5. ಎಕ–3, ಹೆಗ್ಗಡದೇವನಕೋಟೆ 23
6. ಎಕ–3, ಹೆಗ್ಗಡದೇವನಕೋಟೆ 156
7. ಕ್ಷೇತ್ರಕಾರ್ಯ ವರದಿ
8. ರಂಗಸ್ವಾಮಯ್ಯ, ಜಿ.ಆರ್. (1992). *ಕರ್ನಾಟಕ ಸಂಕ್ಷಿಪ್ತ ಚರಿತ್ರೆ.* ಮೈಸೂರು ಪುಟ.216–219
9. ಎಕ–3, ನಂಜನಗೂಡು – 251 ಕಲ್ಲುಂದ, ಪುಟ. 334
10. ಎಕ–3, ನಂಜನಗೂಡು–201 ನಂದಿಗುಂದ, ಪುಟ. 294
11. ಎಕ–3, ಹೆಗ್ಗಡದೇವನಕೋಟೆ 44
12. ಎಕ–3, ಹೆಗ್ಗಡದೇವನಕೋಟೆ 58
13. ಎಕ–4, ಹುಣಸೂರು–10 ತೊಂಡಾಳು, ಪುಟ.487
14. ಎಕ–3, ನಂಜನಗೂಡು 327 ಹುಣಸನಾಳು, ಪುಟ.389
15. ಎಕ–5, ತಿ.ನರಸೀಪುರ–84 ಬೆಟ್ಟಹಳ್ಳಿ, ಪುಟ.470
16. ಎಕ–5, ತಿ.ನರಸೀಪುರ–57 ಬನ್ನೂರು, ಪುಟ.453
17. ನಂಜನಗೂಡು ತಾ.ಗ್ರಾ., 2011, ಪುಟ. 270
18. ಎಕ–5, ತಿ.ನರಸೀಪುರ, ಮೈಸೂರು–212 ಕುಮಾರಬೀಡು, ಪು.314
19. ಎಕ–5, ತಿ.ನರಸೀಪುರ–43 ತುಂಬಲ, ಪು.444
20. ಎಕ–5, ತಿ.ನರಸೀಪುರ–95 ಸೋಮನಾಥಪುರ, ಪು. 488
21. ಎಕ–3, ಹೆಗ್ಗಡದೇವನಕೋಟೆ –56
22. ಎಕ–3, ಹೆಗ್ಗಡದೇವನಕೋಟೆ –74
23. ಎಕ–3, ಹೆಗ್ಗಡದೇವನಕೋಟೆ –82
24. ಎಕ–3, ಹೆಗ್ಗಡದೇವನಕೋಟೆ –54
25. ಎಕ–5, ಮೈಸೂರು–141, ಪು. 278
26. ಎಕ–3, ನಂಜನಗೂಡು–274 ಬದನವಾಳು, ಪು. 349
27. ಎಕ–5, ಕೃಷ್ಣರಾಜನಗರ–112 ಹಂಪಾಪುರ, ಪು. 110
28. ಎಕ–3, ಹೆಗ್ಗಡದೇವನಕೋಟೆ –143
29. ಎಕ–3, ಹೆಗ್ಗಡದೇವನಕೋಟೆ –91
30. ಎಕ–5, ತಿ.ನರಸೀಪುರ–95 ಸೋಮನಾಥಪುರ, ಪು. 488
31. ಎಕ–4, ಪಿರಿಯಾಪಟ್ಟಣ – 10 ಹಾರನಹಳ್ಳಿ, ಪು. 513